೧೯೯೨ರ ಜೂನ ತಿಂಗಳ ಅಂತ್ಯದವರೆಗೆ ಕಾಲಾವಧಿಯನ್ನು ವಿಸ್ತರಿಸಲಾಯಿತು.

ಚುಕ್ಕೆಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು.

ಹರಿಜನ-ಗಿರಿಜನರ ದರಖಾಸ್ತ್ ಜಮೀನು ಮಾರಾಟ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ೩೪೧ (೨೧೪೪) ಶ್ರೀ ಕರಿಯಣ್ಣ (ಹೊಳೆಹೊನ್ನೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದಲ್ಲಿ ಹರಿಜನ-ಗಿರಿಜನರ ದರಖಾಸ್ತು ಜಮೀನು ಮಾರಾಟದ ಕೇಸುಗಳು ಎಷ್ಟು ಬಾಕಿಇರುವುವು?

ಆ) ಬಾಕಿ ಇದ್ದರೆ ಎಷ್ಟು ವರ್ಷದಿಂದ ಇರುತ್ತವೆ? (ಜಿಲ್ಲಾವಾರು ವಿವರ ನೀಡುವುದು)

ಇ) ಹಾಗಿದ್ದಲ್ಲಿ, ಇದುವರೆವಿಗೆ ಈ ಕೇಸುಗಳು ಬಾಕಿ ಉಳಿಯಲು ಕಾರಣವೇನು?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಕಂದಾಯ ಸಚಿವರು):

ಅ) ೧,೩೭೦

ಆ) ಎಷ್ಟು ವರ್ಷಗಳಿಂದ ಬಾಕಿ ಇರುತ್ತದೆ ಎಂಬ ಬಗ್ಗೆ ಮಾಹಿತಿಯನ್ನು ಇದಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ಒದಗಿಸಿದೆ.

ಇ) ಇಂತಹ ಪ್ರಕರಣಗಳಲ್ಲಿ ಸೂಕ್ಷ್ಮ ದೃಷ್ಟಿಯಿಂದ ಪರಿಶೀಲಿಸಿ ನ್ಯಾಯ ಸಮ್ಮತವಾಗಿ, ಕರ್ನಾಟಕ ಪರಿಶಿಷ್ಟ ಜಾತಿ/ಪಂಗಡಗಳ ಕೆಲವು ಜಮಿನುಗಳ ಪರಭಾರೆ ನಿಷೇದ ಕಾಯ್ದೆ ೧೯೭೮ರ ಅಡಿಯಲ್ಲಿ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಈ ಪ್ರಕರಣಗಳಲ್ಲಿ ನ್ಯಾಯಾಲಯದಲ್ಲಿ ತೀರ್ಮಾನಗಳನ್ನು ತೆಗೆದುಕೊಳ್ಳಲು, ಸಾಕಷ್ಟು ಕಾಲಾವಕಾಶವು ತೆಗೆದುಕೊಳ್ಳುವುದು ಸಹಜವಾಗಿರುತ್ತದೆ ಮತ್ತು ವಿಳಂಬಕ್ಕೆ ಆಸ್ಪದ ಕೊಡುತ್ತದೆ, ಏಕೆಂದರೆ ಈ ಪ್ರಕರಣಗಳಲ್ಲಿ ದಾಖಲಾತಿಗಳನ್ನು ಒದಗಿಸಲು, ಸಾಕ್ಷಿಗಳನ್ನು ಕರೆತರಲು, ವಾದವನ್ನು ಮಂಡಿಸಲು, ಉಭಯತ್ರ ಪಾರ್ಟಿಗಳಿಗೂ ನ್ಯಾಯ ಸಮ್ಮತವಾಗಿ ಸಮಾನ ಕಾಲಾವಕಾಶ ಕೊಡಬೇಕಾಗುತ್ತದೆ. ಹಾಗೂ ನೊಂದ ಕಕ್ಷಿದಾರರು ಜಿಲ್ಲಾಧಿಕಾರಿಗಳಿಗೆ ಮೇಲ್ಮನವಿಯನ್ನು ಅಥವಾ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್‌ನ್ನು ಸಲ್ಲಿಸುವುದರಿಂದ ಆ ನ್ಯಾಯಾಲಯಗಳಲ್ಲಿ ತೀರ್ಮಾನಗಳು ತೆಗೆದುಕೊಳ್ಳುವಲ್ಲಿ ಪ್ರಕರಣಗಳು ವಿಳಂಬವಾಗುವ ಸಂಭವವಿರುತ್ತದೆ.

ಅನುಬಂಧ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಬಾಕಿ ಇರುವ ಪ್ರಕರಣಗಳ	ಎಷ್ಟು ವರ್ಷಗಳಿಂದ ಬಾಕಿ ಇರುತ್ತದೆ
೧.	ಬೆಂಗಳೂರು (ನಗರ)	೯೨	೬ ತಿಂಗಳಿಂದ ೬ ವರ್ಷಗಳವರೆಗೆ
೨.	ಬೆಂಗಳೂರು (ಗ್ರಾಮಾಂತರ)	೨೧೪	೬ ತಿಂಗಳಿಂದ ೬ ವರ್ಷಗಳವರೆಗೆ
೩.	ಕೋಲಾರ	೪೦೫	೬ ತಿಂಗಳಿಂದ ೧೦ ವರ್ಷಗಳವರೆಗೆ

೪.	ತುಮಕೂರು	೧೩೪	೬ ತಿಂಗಳಿಂದ ೧೦ ವರ್ಷಗಳವರೆಗೆ
೫.	ಚಿತ್ರದುರ್ಗ	೧೦೩	೬ ತಿಂಗಳಿಂದ ೮ ವರ್ಷಗಳವರೆಗೆ
೬.	ಶಿವಮೊಗ್ಗ	೯೧	೬ ತಿಂಗಳಿಂದ ೧೨ ವರ್ಷಗಳವರೆಗೆ
೭.	ಮೈಸೂರು	೫೩	೬ ತಿಂಗಳಿಂದ ೧೨ ವರ್ಷಗಳವರೆಗೆ
೮.	ಮಂಡ್ಯ	೨೯	೬ ತಿಂಗಳಿಂದ ೧೦ ವರ್ಷಗಳವರೆಗೆ
೯.	ಹಾಸನ	೧೮೨	೬ ತಿಂಗಳಿಂದ ೧೦ ವರ್ಷಗಳವರೆಗೆ
೧೦.	ಚಿಕ್ಕಮಗಳೂರು	೧೭	ಒಂದು ವರ್ಷದಿಂದ
೧೧.	ದಕ್ಷಿಣ ಕನ್ನಡ	೨೫	೬ ತಿಂಗಳಿಂದ
೧೨.	ಕೊಡಗು	೯	೬ ತಿಂಗಳಿಂದ ೨ ವರ್ಷಗಳವರೆಗೆ
೧೩.	ಬೆಳಗಾಂ	೬	೨-೧/೨ ವರ್ಷಗಳಿದ.
೧೪.	ಬಿಜಾಪುರ	೧	೧ ತಿಂಗಳಿಂದ
೧೫.	ಧಾರವಾಡ	—	—
೧೬.	ಉತ್ತರ ಕನ್ನಡ	—	—
೧೭.	ಗುಲ್ಬರ್ಗ	—	—
೧೮.	ರಾಯಚೂರು	—	—
೧೯.	ಬಳ್ಳಾರಿ	—	—
೨೦.	ಬೀದರ್	೯	೬ ತಿಂಗಳಿಂದ ೨ ವರ್ಷಗಳವರೆಗೆ.

ಶ್ರೀ ಕರಿಯಣ್ಣ:- ಮಾನ್ಯ ಮಂತ್ರಿಗಳು ಉತ್ತರದಲ್ಲಿ ಕೋಲಾರದಲ್ಲಿ ೪೦೫ ಕೇಸ್‌ಗಳು ೧೦ ವರ್ಷಗಳಿಂದ ಇದೆ ಎಂದು ಹೇಳ್ತಿದ್ದಾರೆ. ಯಾವ ಕಾರಣದಿಂದ ಈ ೪೦೫ ಕೇಸ್‌ಗಳು ೬ರಿಂದ ೧೦ ವರ್ಷ ಇದೆಯೋ ತಿಳಿಸಲಿಲ್ಲ. ಅದನ್ನು ದಯಮಾಡಿ ತಿಳಿಸಬೇಕು ಎಂದು ಕೋರುತ್ತೇನೆ. ಇದಲ್ಲದೆ ಇಡೀ ರಾಜ್ಯದಲ್ಲಿ ೧೩೭೦ ಕೇಸ್‌ಗಳಿವೆ ಆದರಲ್ಲಿ ರೆವಿನ್ಯೂ ಇಲಾಖೆಯವರು ಕೋರ್ಟಿಗೆ ತಪ್ಪು ಅಭಿಪ್ರಾಯ ಕೊಡುವುದರಿಂದ ಈ ಕೇಸಿಗೆ ಧಕ್ಕೆಯಾಗುತ್ತದೆ. ಕಾರಣವೇನೆಂದರೆ, ಹೈಕೋರ್ಟ್‌ನಲ್ಲಿ ಕ್ರಾಪ್ ಇದೆ ಎಂದು ಹೇಳಿದ್ದರಿಂದ ಕ್ರಾಪ್ ಕಟಾವ್ ಆದಮೇಲೆ ಜಮೀನನ್ನು ಖಾಲಿ ಮಾಡಿಕೊಡಿ ಎಂದು ಆರ್ಡರ್ ಮಾಡಿರುತ್ತಾರೆ. ಇವರು ಏನು ಮಾಡುತ್ತಾರೆಂದರೆ ಕ್ರಾಪ್ ಕಟಾವ್ ಆದಮೇಲೆ ಮತ್ತೊಂದು ಸಾರಿ ಕಬ್ಬು ಬಿಗುರುತ್ತದೆ. ಆಗ ರೆವಿನ್ಯೂ ಇನ್ಸ್‌ಪೆಕ್ಟರ್ ಮತ್ತು ತಹಸೀಲ್ದಾರ್‌ಗಳು ಮತ್ತೆ ಕಬ್ಬಿದೆ ಎಂದು ಬರೆದು ಕೊಡುತ್ತಾರೆ. ಮತ್ತೂ ಹೈಕೋರ್ಟಿನವರು ಸ್ಟೇ ಕೊಡುತ್ತಾರೆ. ಆದಕ್ಕಾಗಿ ಇದಕ್ಕೇನಾದರೂ ಅಂತಿಮವಾಗಿ ಕಾನೂನು ಜಾರಿಗೆ ಬರುವುದಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಬರ್ಗೆ:- ಇದೊಂದು ಮಹತ್ವದ ಕಾನೂನು ಮತ್ತು ಇದರಡಿಯಲ್ಲಿ ಎಸ್. ಸಿ. ಮತ್ತು ಎಸ್. ಟಿ. ಜನಾಂಗದವರಿಗೆ ಸಾಕಷ್ಟು ಲಾಭವಾಗಿದೆ. ಒಟ್ಟು

ಕೇಸ್‌ಗಳಲ್ಲಿ ಡಿಟೆಕ್ಟ್ ಆಗಿದ್ದು ೪೦೦೧೪. ಅದರಲ್ಲಿ ಸುಮಾರು ೨೬,೯೯೮ರಲ್ಲಿ ಪೊಜಿಷನ್ ರೆಸ್ಟೋರ್ ಮಾಡಿದ್ದಾರೆ. ಮತ್ತು ರಿಜೆಕ್ಟಾಗಿದ್ದು ೧೨೫೪೬ ಅಂದರೆ ಕಂಡೀಷನ್ ಎಲ್ಲ ಸರಿಯಾಗಿದ್ದುದನ್ನು ನೋಡಿಕೊಂಡು ರಿಜೆಕ್ಟ್ ಮಾಡಿದಂಥವು ೧೨ ಸಾವಿರ. ಈಗ ಪೆಂಡಿಂಗ್ ಇರುವುದು ಕೇವಲ ೧೫೭೦ ಎಕ್ಸ್‌ಟೆಂಟ್ ಏನೆಂದರೆ ೩೭೪೫ ಇದಕ್ಕೆ ಡಿಲೇ ಆಗಲು ಕಾರಣಗಳು ಅನೇಕ ಇವೆ. ಕೇವಲ ಕಾರಣ ಒಂದು ಎಂದು ಹೇಳಲಿಕ್ಕಾಗುವುದಿಲ್ಲ. ಒಂದು ರೀಸನಬಲ್ ಆಪರ್ಚುನಿಟಿ ನಮಗೆ ಕೊಟ್ಟಿಲ್ಲ ಎಂದು ಅನೇಕ ಸಾರಿ ಪಾರ್ಟಿಗಳಾಗಲಿ ಅಥವಾ ಅವರ ಪರವಾಗಿರುವ ಅಡ್ವೋಕೇಟ್ಸಾಗಲಿ ಬಂದು ಸ್ಟೇ ತೆಗೆದುಕೊಳ್ಳುತ್ತಾರೆ ಅಥವಾ ಟೈಂ ತೆಗೆದು ಕೊಳ್ಳುತ್ತಾರೆ. ಎರಡನೆಯದು ನಮಗೆ ನ್ಯಾಚುರಲ್ ಜಸ್ಟೀಸ್ ಸಿಗಬೇಕಾದರೆ ಒಂದು ಅವಕಾಶ ಕೊಡಿ, ಎರಡು ಅವಕಾಶ ಕೊಡಿ ಎಂದು ಕೇಳಿಕೊಂಡು ಅಡ್‌ಜರ್ನ್‌ಮೆಂಟ್ ತೆಗೆದುಕೊಳ್ಳುತ್ತಾರೆ. ಮೂರನೆಯದು, ಅಸಿಸ್ಟೆಂಟ್ ಕಮೀಶನರ್ಸ್‌ಗೆ ನಾವು ಟಾರ್ಗೆಟ್ ಪ್ರತಿ ತಿಂಗಳು ಕನಿಷ್ಠ ೨೫ ಕೇಸಾದರೂ ಮಾಡಬೇಕೆಂದು ಕೊಟ್ಟಿದ್ದೇವೆ. ಕೆಲವು ಎಸಿಗಳು ಮಾಡುತ್ತಾ ಇಲ್ಲ. ಅದಕ್ಕೆ ಪುನಃ ನಾನು ಅವರಿಗೆ ಒಂದು ಗುರಿಯನ್ನು ಕೊಟ್ಟು ಇಷ್ಟು ದಿವಸದಲ್ಲಿ ನೀವು ಇದನ್ನು ಮುಗಿಸಬೇಕೆಂದು ಮೂರು ತಿಂಗಳೋ ಆರು ತಿಂಗಳೋ ಟೈಂ ಕೊಟ್ಟು ನಿರ್ಬಂಧವನ್ನು ಹಾಕಿ ಸುತ್ತೋಲೆಯನ್ನು ಕಳಿಸುತ್ತೇವೆ. ಮತ್ತೆ ಕೆಲವು ಕೇಸಸ್ ಹೈಕೋರ್ಟ್‌ನಲ್ಲಿ ಪೆಂಡಿಂಗ್ ಇವೆ. ನಾನಾ ಕಾರಣಗಳಿಂದ ೧೫೭೦ ಕೇಸಸ್ ಮಾತ್ರ ಪೆಂಡಿಂಗ್ ಇದೆ.

ಶ್ರೀ ಕರಿಯಣ್ಣ:- ಒಂದು ಸಲ ಅಲ್ಲಿ ಕ್ರಾಪಿದೆ ಆ ಕ್ರಾಪ್ ಕಟಾವ್ ಆದಮೇಲೆ ಪೊಜಿಷನ್ ಹ್ಯಾಂಡ್‌ಓವರ್ ಮಾಡಿ ಎಂದು ಹೈಕೋರ್ಟ್ ಕೊಟ್ಟಿದ್ದಾರೆ. ಕ್ರಾಪ್ ಕಟಾವ್ ಆದಮೇಲೆ ಮತ್ತೊಂದು ಸಾರಿ ತೆಗೆದುಕೊಂಡು ಹೋಗಿ ಕೊಟ್ಟರು. ಕ್ರಾಪ್ ಇದೆಯೆಂದು ರವಿನ್ಯೂ ಆಫೀಸರ್ ರಿಪೋರ್ಟ್ ಬಂತು. ಮತ್ತೆ ಅದೇ ಜಮೀನಿಗೆ ಸ್ಟೇ ಕೊಡುತ್ತಾರೆ. ಅಂಥ ಕೇಸಸ್‌ಗೆ ತಾವು ಹೈಕೋರ್ಟ್‌ನವರಿಗೂ ತಿಳಿಸಬೇಕಾಗುತ್ತದೆ. ಒಂದು ಸಾರಿ ಅವರು ಸ್ಟೇ ಕೊಟ್ಟಿದ್ದಾರೆ. ಆಮೇಲೆ ಕಟಾವು ಆಯಿತು. ಕಟಾವು ಆದಮೇಲೆ ಪೊಜಿಷನ್ ಕೊಡಿ ಎಂದು ಅವರೇ ಆರ್ಡರ್ ಮಾಡಿದ್ದಾರೆ. ಪೊಜಿಷನ್ ಕೊಡುವಂಥ ಸಂದರ್ಭದಲ್ಲಿ ಮತ್ತೆ ಫಸಲು ಇದೆ, ಮತ್ತೆ ಅವನಿಗೆ ಮಾಡಿಕೊಡಿ ಎಂದು ಹೇಳುತ್ತಾರೆ. ಅಂಥ ಸಂದರ್ಭದಲ್ಲಿ ತಾವು ಅಡ್ವೋಕೇಟ್‌ಗಳಿಗೆ ಹೇಳಬೇಕು. ಏತಕ್ಕೆಂದರೆ ಸರ್ಕಾರಿ ಅಡ್ವೋಕೇಟ್ಸ್‌ಗಳು ಸಮರ್ಪಕವಾಗಿ ಕೋರ್ಟಿನಲ್ಲಿ ಅಟೆಂಡ್ ಆಗುವುದಿಲ್ಲ. ಹೀಗಾಗಿ ಈ ಕೇಸ್‌ಗಳು ಹತ್ತು ವರ್ಷ ಎಳೆಯುವುದಕ್ಕೆ ಕಾರಣವಾಗಿದೆ. ಈ ಕೇಸನ್ನು ಡೀಲ್ ಮಾಡತಕ್ಕಂಥ ಸರ್ಕಾರಿ ವಕೀಲರುಗಳಿಗೆ ತಾಪು ಸರಿಯಾದ ರೀತಿಯಲ್ಲಿ ಅವರು ಅಟೆಂಡ್ ಆಗಬೇಕು ಮತ್ತು ಈ ಕೇಸಿನ ಬಗ್ಗೆ ಹೈಕೋರ್ಟ್ ಜಡ್ಜ್‌ಗಳಿಗೆ ಮಾಹಿತಿಯನ್ನು ತಿಳಿಸಬೇಕು ಎಂದು ತಮ್ಮಲ್ಲಿ ವಿನಂತಿ ಮಾಡಿ ಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಸದಸ್ಯರು ಒಳ್ಳೆಯ ಸೂಚನೆಯನ್ನು ಕೊಟ್ಟಿದ್ದಾರೆ. ನಾನು ಅಡ್ವೋಕೇಟ್ ಜನರಲ್ ಅವರನ್ನು ಕರೆಯಿಸಿ ಮಾತನಾಡುತ್ತೇನೆ. ಕೆಲವು ಅಡ್ವೋಕೇಟ್ಸ್‌ನ್ನು ಸ್ಪೆಷಲ್ ಆಗಿ ಅಪಾಯಿಂಟ್ ಮಾಡಿಕೊಂಡು ಇದರ ಬಗ್ಗೆ ಆಸಕ್ತಿಯನ್ನು ವಹಿಸಿ ಈ ಕೇಸಸ್‌ನ್ನು ಡಿಸ್‌ಪೋಸ್ ಆಫ್ ಮಾಡುವುದಕ್ಕೆ ಪ್ರಯತ್ನ ಮಾಡಿಸುತ್ತೇನೆ.

ಮಟಕಿ ಕೆರೆಯಲ್ಲಿ ಬಿರುಕು.

ಶ್ರೀ ಜಿ. ರಾಮಕೃಷ್ಣ (ಕಮಲಾಪುರ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ